ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1.

ಸಂಖ್ಯೆ: ಸಿ1(4) ವರ್ಗಾವಣೆ: 01/2010-11 ದಿನಾಂಕ: 24-03-2011

## ಸುತ್ತೋಲೆ

ವಿಷಯ:- ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2007 ರಡಿಯಲ್ಲಿ ರೂಪಿಸಲಾಗಿರುವ ನಿಯಮಗಳಂತೆ 2011ರ ಎಪ್ರಿಲ್/ಮೇ ಮಾಹೆಯ ವರ್ಗಾವಣೆ ಪೂರ್ವ ಸಿದ್ದತೆಯ ಬಗ್ಗೆ

ಉಲ್ಲೇಖ:-1.ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 1 ಶಾಸನ 2007 ದಿನಾಂಕ: 01.09.2007

2.ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007 ದಿನಾಂಕ: 15.10.2007

3.ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 173 ಇಟಿಆರ್ 2007 ದಿನಾಂಕ: 14.11.2007

4.ದಿನಾಂಕ: 09.03.2011 ಮತ್ತು 21.03.2011 ರಂದು ನಡೆದ ಸಭೆಯ ನಡವಳಿ

******

ಉಲ್ಲೇಖ-1 ರಂತೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2007 ಜಾರಿಗೆ ಬಂದಿರುತ್ತದೆ. ಈ ಅಧಿನಿಯಮಕ್ಕೆ ಉಲ್ಲೇಖ-2 ರಂತೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007 ರೂಪಿಸಿ ಪ್ರಕಟಿಸಲಾಗಿದೆ. ಉಲ್ಲೇಖ-3 ರಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2007 ರ ಕಲಂ-2 ರಲ್ಲಿನ ಉಪಕಂಡಗಳಾದ (ಇ) ಮತ್ತು (ಕೆ) ರಂತೆ ಶಿಕ್ಷಕರುಗಳ / ಉಪನ್ಯಾಸಕರ ನೇರ ನೇಮಕಾತಿ / ವಿಲೀನಗೊಳಿಸುವ ಮೂಲಕ ಅಥವಾ ಬಡ್ತಿ ಮೂಲಕ ಹಾಗು ವರ್ಗಾವಣೆಗಾಗಿ ಎಲ್ಲಾ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆಗಳನ್ನು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಎ,ಬಿ ಮತ್ತು ಸಿ ವಲಯಗಳಾಗಿ ವರ್ಗೀಕರಿಸಲು ಪ್ರದೇಶ ಹಾಗೂ ವ್ಯಾಪ್ತಿಯನ್ನು ಅಧಿಸೂಚಿಸಿದೆ.

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2007 ರಡಿಯಲ್ಲಿ ರೂಪಿಸಲಾಗಿರುವ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007, ರಂತೆ 2011ರ ಎಪ್ರಿಲ್/ಮೇ ಮಾಹೆಯಲ್ಲಿ ವರ್ಗಾವಣೆ ಮಾಡವ ಸಂಬಂಧ ಪೂರ್ವ ಸಿದ್ದತೆಯನ್ನು ಮಾಡಿಕೊಳ್ಳಬೇಕಾಗಿರುತ್ತದೆ.

ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗು ತತ್ಸಮಾನ ವೃಂದದ ವೃಂದಬಲ ಮತ್ತು ಖಾಲಿ ಹುದ್ದೆಗಳನ್ನು up date ಮಾಡಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ವೃಂದಬಲ ಮತ್ತು ಖಾಲಿ ಹುದ್ದೆಗಳ ಬಗ್ಗೆ ತಂತ್ರಾಂಶವನ್ನು ರೂಪಿಸಲಾಗಿದೆ. ಸದರಿ ತಂತ್ರಾಂಶವನ್ನು ಇಲಾಖೆಯ ವೆಬ್‌ಸೈಟ್ www.schooleducation.kar.nic.in ನಲ್ಲಿ ಪ್ರಕಟಿಸಲಾಗಿದೆ.

<u>**ಎ, ಬಿ ಮತ್ತು ಸಿ ವಲಯಗಳನ್ನು up date ಮಾಡುವುದು:-**</u> ಉಲ್ಲೇಖ-3ರಂತೆ ವರ್ಗಾವಣೆಗಾಗಿ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳು, ಸರ್ಕಾರಿ ಪ್ರೌಢ ಶಾಲೆಗಳು, ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳು ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಕಛೇರಿಗಳನ್ನು ಎ, ಬಿ ಮತ್ತು ಸಿ ವಲಯಗಳಾಗಿ ಈ ಹಿಂದೆ ವರ್ಗೀಕರಿಸಿರುವುದನ್ನು On-Line ನಲ್ಲಿ up date ಮಾಡಲು ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ನಿರ್ದೇಶನ ನೀಡುವುದು. ಜಿಲ್ಲಾ ಕಛೇರಿಗಳ ವಿವರವನ್ನು ಉಪ ನಿರ್ದೇಶಕರ (ಆಡಳಿತ) ರವರ ಕಛೇರಿಯಿಂದ up date ಮಾಡುವುದು.

<u>**ವೃಂದಬಲ:-**</u> ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು, ಉಪಪ್ರಾಂಶುಪಾಲರು, ಸಹಾಯಕ ನಿರ್ದೇಶಕರು, (ಮಧ್ಯಾಹ್ನ ಉಪಹಾರ ಯೋಜನೆ), ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು, ಮಂಜೂರಾದ ಹುದ್ದೆಗಳ ವಿವರವನ್ನು On-Line ನಲ್ಲಿ ಭರ್ತಿ ಮಾಡಲು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ನಿರ್ದೇಶನ ನೀಡುವುದು. ಜಿಲ್ಲಾ ಕಛೇರಿಯ ವಿಷಯ ಪರಿವೀಕ್ಷಕರು, ಸಹಾಯಕ ಯೋಜನಾ ಸಮನ್ವಯಾಧಿಕಾರಿಗಳು, (ಎಸ್.ಎಸ್.ಎ/ಆರ್.ಎಂ.ಎಸ್.ಎ) ಸರ್ಕಾರಿ ಟಿ.ಟಿ.ಐನ ಬಿ ವೃಂದದ ಹುದ್ದೆಗಳು, ಮತ್ತು ಉಪನ್ಯಾಸಕರು ಡಯಟ್ ಇಲ್ಲಿಗೆ ಮಂಜುರಾಗಿರುವ ಹುದ್ದೆಗಳ ವಿವರವನ್ನು ಉಪ ನಿರ್ದೇಶಕರ ಕಛೇರಿಯಿಂದ ಭರ್ತಿ ಮಾಡುವುದು.

<u>**ಖಾಲಿ ಹುದ್ದೆಗಳ ಭರ್ತಿ:-**</u> ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು, ಉಪಪ್ರಾಂಶುಪಾಲರು, ವಿಷಯ ಪರಿವೀಕ್ಷಕರು, ಸಹಾಯಕ ನಿರ್ದೇಶಕರು, (ಮಧ್ಯಾಹ್ನ ಉಪಹಾರ ಯೋಜನೆ), ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು, ಸಹಾಯಕ ಯೋಜನಾ ಸಮನ್ವಯಾಧಿಕಾರಿಗಳು, (ಎಸ್.ಎಸ್.ಎ/ಆರ್.ಎಂ.ಎಸ್.ಎ) ಸರ್ಕಾರಿ ಟಿ.ಟಿ.ಐನ ಬಿ ವೃಂದದ ಹುದ್ದೆಗಳು, ಮತ್ತು ಡಯಟ್ ಉಪನ್ಯಾಸಕರ ಖಾಲಿ ಹುದ್ದೆಗಳ ಮಾಹಿತಿಯನ್ನು ಭರ್ತಿ ಮಾಡಲು ಕ್ರಮ ವಹಿಸುವಂತೆ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರನ್ನು ಕೋರಿದೆ.

ಮೇಲಿನ ಎಲ್ಲಾ ಮಾಹಿತಿಗಳನ್ನು ಇಲಾಖೆಯ ವೆಬ್‌ಸೈಟ್ www.schooleducation.kar.nic.in ನಲ್ಲಿ ಪ್ರಕಟಿಸಲಾಗಿರುವ ತಂತ್ರಾಂಶದಲ್ಲಿ ದಿನಾಂಕ: 05-04--2011ರೊಳಗೆ ಭರ್ತಿ ಮಾಡಲು ತಿಳಿಸಿದೆ.

<u>**DISE ಕೋಡ್:-**</u> On-Lineನ ಸಾಪ್ಟವೇರ್‌ನಲ್ಲಿ ಎ. ಬಿ ಮತ್ತು ಸಿ. ವಲಯಗಳೆಂದು ಪ್ರಕಟಿಸಲಾಗಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ಕಾರಿ ಶಾಲಾ, ಕಾಲೇಜು, ಕಛೇರಿಗಳಲ್ಲಿ ಯಾವುದೇ ಸರ್ಕಾರಿ ಶಾಲಾ, ಕಾಲೇಜು ಕಛೇರಿಗಳಿಗೆ DISE ಕೋಡ್ ದೊರೆಯದಿದ್ದಲ್ಲಿ ಕೂಡಲೇ DISE ಕೋಡ್ ಪಡೆಯವ ಬಗ್ಗೆ ಹಿರಿಯ ಸಹಾಯಕ ನಿರ್ದೇಶಕರು ಇ ಆಡಳಿತ ಘಟಕ ಸರ್ವ ಶಿಕ್ಷಣ ಅಭಿಯಾನ ಬೆಂಗಳೂರು ಇವರಿಗೆ ಪ್ರಸ್ತಾವನೆ ಸಲ್ಲಿಸಲು ಕೋರಿದೆ.

(ಕೆ. ಕೃಷ್ಣೇಗೌಡ)
ಜಂಟಿ ನಿರ್ದೇಶಕರು (ಆಡಳಿತ)
ಆಯುಕ್ತರ ಪರವಾಗಿ

ಗೆ,

1. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಮುಂದಿನ ಕ್ರಮಕ್ಕಾಗಿ.

2. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು (ಅಭಿವೃದ್ಧಿ) ರವರು ಡಯಟ್ ಮತ್ತು ಟಿ.ಟಿ.ಐ ನ ಮುಖ್ಯ ಶಿಕ್ಷಕರ ವೃಂದದ ಖಾಲಿ ಹುದೆಗಳ ಮಾಹಿತಿಯನ್ನು ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ನೀಡುವುದು. (ವೃತ್ತಿ ಶಿಕ್ಷಣ, ದೈಹಿಕ ಶಿಕ್ಷಣ ಇತರೆ ಗ್ರೂಪ್ ಬಿ ಹುದ್ದೆಗಳನ್ನು ಮುಖ್ಯ ಶಿಕ್ಷಕರ ಗ್ರೂಪ್ ಬಿ ವೃಂದ ಎಂದು ಪರಿಗಣಿಸ ಬಾರದು)

ಪ್ರತಿಯನ್ನು:-

1. ಸರ್ಕಾರದ ಪ್ರಾಧಾನ ಕಾರ್ಯದರ್ಶಿಗಳು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು-01
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಗುಲ್ಬರ್ಗಾ
3. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ
4. ನಿರ್ದೇಶಕರು, (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು, (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
6. ಸಹ ನಿರ್ದೇಶಕರು,-1 ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
7. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಘಟಕ, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
8. ಆಯುಕ್ತರ ಆಪ್ತ ಕಾರ್ಯದರ್ಶಿಯವರಿಗೆ.
9. ಶ್ರೀ ಶಿವಕುಮಾರ್ ಪ್ರೋಗ್ರಾಮರ್, ಇ-ಆಡಳಿತ ಘಟಕ, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
10. ಕಛೇರಿ ಪ್ರತಿ. F:\e-data\C1[4]\Shiva-Trans-2011.doc